KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
DEPARTMENT / SUBJECT:
NAME OF THE NEWS PAPER: ಕನ್ನಡಪ್ರಭ
DATE: 11/09/2017

# ಡಿಕೆಶಿ ಪುತ್ರಿಗೂ ಸಮನ್ಸ್

## ನಾಳೆ ವಿಚಾರಣೆಗೆ ಹಾಜರಾಗುವಂತೆ ಐಶ್ವರ್ಯಗೆ ಇ.ಡಿ. ಸೂಚನೆ

## ಆರ್ಥಿಕ ಮೂಲ ಇರದಿದ್ದರೂ 70 ಕೋಟಿ ವರ್ಗಾವಣೆ ಬಗ್ಗೆ ತನಿಖೆ?

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಕ್ರಮ ಹಣ ವರ್ಗಾ ಪ್ರಕರಣದಲ್ಲಿ ಡಿ.ಕೆ.ಶಿವಕುಮಾರ್ ಬಳಿಕ ಅವರ ಪುತ್ರಿ ಐಶ್ವರ್ಯ ಅವರಿಗೂ ಸಂಕಷ್ಟ ಎದುರಾಗಿದ್ದು, ಗುರುವಾರ ವಿಚಾರಣೆಗೆ ಬರಲು ಜಾರಿ ನಿರ್ದೇಶನಾಲಯ (ಇ.ಡಿ.) ಸಮನ್ಸ್ ಜಾರಿಗೊಳಿಸಿದೆ.



ಮಂಗಳವಾರ ಬೆಂಗಳೂರಿನ ಡಿಕೆಶಿ ಮನೆಗೆ ಸಮನ್ಸ್ ಅಂಟಿಸಿರುವ ಇ.ಡಿ. ಅಧಿಕಾರಿಗಳು, ಗುರುವಾರ ಬೆಳಗ್ಗೆ ದೆಹಲಿಯ ಕಚೇರಿಗೆ ಹಾಜರಾಗುವಂತೆ ಸೂಚಿಸಿದ್ದಾರೆ. ಮರುದಿನ ಶುಕ್ರವಾರ ಡಿಕೆಶಿ ಇ.ಡಿ. ಕಸ್ಟಡಿ ಮುಗಿಯಲಿದೆ. ಈ ಹಿನ್ನೆಲೆಯಲ್ಲಿ ಪ್ರಕರಣದ ಕುರಿತು ಅವರ ಪುತ್ರಿ, ತನಿಖಾಧಿಕಾರಿಗಳಿಗೆ ನೀಡುವ ಹೇಳಿಕೆ ಮಹತ್ವ ಪಡೆದುಕೊಂಡಿದೆ.

ಯಾವುದೇ ಉದ್ಯಮ ಅಥವಾ ಸ್ವಂತ ಆರ್ಥಿಕ ಮೂಲ ಹೊಂದಿರದ ಡಿಕೆಶಿ ಪುತ್ರಿ, ಐಶ್ವರ್ಯ ಹೆಸರಿನಲ್ಲಿ ₹70 ಕೋಟಿ ಹಣ ವರ್ಗಾವಣೆಯಾಗಿದೆ. ಅಲ್ಲದೆ ಉದ್ಯಮಿ ವಿ.ಜಿ.ಸಿದ್ದಾರ್ಥ್ ಅವರೊಂದಿಗೂ ಐಶ್ವರ್ಯ ಹೆಸರಿನಲ್ಲಿ ಹಣಕಾಸು ವ್ಯವಹಾರ ನಡೆದಿತ್ತು. ರಾಜರಾಜೇಶ್ವರಿ ನಗರದ ಸಮೀಪ ಡಿಕೆಶಿ ತಾಯಿ ಹೆಸರಲ್ಲಿದ್ದ 3 ಎಕರೆ ಭೂಮಿ ಮೊಮ್ಮಗಳಿಗೆ ಉಡುಗೊರೆ ರೂಪದಲ್ಲಿ ಹಸ್ತಾಂತರವಾಗಿದೆ. ಈ ಎಲ್ಲಾ ವ್ಯವಹಾರ ಬಗ್ಗೆ ಶಂಕಿಸಿರುವ ಇ.ಡಿ., ಮಾಜಿ ಸಚಿವರ ಪುತ್ರಿಯನ್ನು ವಿಚಾರಣೆಗೆ ಒಳಪಡಿಸಲಿದೆ ಎನ್ನಲಾಗಿದೆ. ನನ್ನ ಹೆಸರಿನಲ್ಲಿ ತಂದೆ ಹಣಕಾಸು ವ್ಯವಹಾರ ನಡೆಸಿದ್ದಾರೆ ಎಂದು ಐಶ್ವರ್ಯ ಹೇಳಿಕೆ ನೀಡಿದರೆ ಡಿಕೆಶಿಗೆ ಇ.ಡಿ. ಉರುಳು ಮತ್ತಷ್ಟು ಬಿಗಿ ಆಗಲಿದೆ. ಬೇನಾಮಿ ಆಸ್ತಿ ಆರೋಪದಡಿ ಪ್ರಕರಣ ಸಹ ದಾಖಲಾಗಬಹುದು. ಹೀಗಾಗಿ ಗುರುವಾರ ವಿಚಾರಣೆ ವೇಳೆ ಐಶ್ವರ್ಯ ನೀಡುವ ಹೇಳಿಕೆ ಕುತೂಹಲ ಕೆರಳಿಸಿದೆ ಎಂದು ತಿಳಿದುಬಂದಿದೆ.

## ಡಿಕೆಶಿ ಹೋರಾಟಕ್ಕೆ ಕಾಂಗ್ರೆಸ್ ಸಹಕಾರ: ಸೋನಿಯಾ ಅಭಯ



• **ಕನ್ನಡಪ್ರಭ ವಾರ್ತೆ** ನವದೆಹಲಿ

ಇ.ಡಿ. ವಿಚಾರಣೆ ಎದುರಿಸುತ್ತಿರುವ ಮಾಜಿ ಸಚಿವ ಡಿ.ಕೆ.ಶಿವಕುಮಾರ್ ಅವರ ಸೋದರ, ಸಂಸದ ಡಿ.ಕೆ.ಸುರೇಶ್‌ರನ್ನು ಮಂಗಳವಾರ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ತಮ್ಮ ನಿವಾಸಕ್ಕೆ ಆಹ್ವಾನಿಸಿ ಅರ್ಧ ಗಂಟೆ ಮಾತುಕತೆ ನಡೆಸಿದ್ದಾರೆ. ಈ ವೇಳೆ ಅವರು ಡಿಕೆಶಿ ಹೋರಾಟಕ್ಕೆ ಪಕ್ಷದ ವತಿಯಿಂದ ಎಲ್ಲ ರೀತಿಯ ನೆರವು ನೀಡುವ ಅಭಯ ನೀಡಿದ್ದಾರೆ ಎನ್ನಲಾಗಿದೆ.

ವಿವರ 9